ರೇಷ್ಮೆ ನಿಟ್ಟಿಂಗ್

2685 (3626) ಶ್ರೀ ರಾಜುಗೌಡ ಜಿ. (ಹನ್ನೂರು) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದೇಶಿಯ ಮತ್ತು ವಿದೇಶಿಯ ಮಾರುಕಟ್ಟೆಯಲ್ಲಿ ಹೆಣಿಗೆ (ನಿಟ್ಟಿಂಗ್) ರೇಷ್ಮೆ ಉತ್ಪನ್ನಗಳಿಗೆ ಬೇಡಿಕೆ ಇದೆಯೇ;

ಆ) ರೇಷ್ಮೆ ಉತ್ಪಾದನೆಯಲ್ಲಿ ಭಾರತಕ್ಕೆ ವಿಶ್ವದಲ್ಲೇ 2ನೇ ಸ್ಥಾನದಲ್ಲಿ ಇದ್ದರೂ ಇದುವರೆವಿಗೆ ರೇಷ್ಮೆ ಹೆಣಿಗೆ (ನಿಟ್ಟಿಂಗ್) ತಂತ್ರಜ್ಞಾನವನ್ನು ರಾಜ್ಯದಲ್ಲಿ ಎಲ್ಲೂ ಬಳಸಿಕೊಂಡಿಲ್ಲ ಎಂಬುದು ನಿಜವೇ;

ಇ) ಹೆಣಿಗೆ ಮಾಡಿದ ರೇಷ್ಮೆ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇದೆಯೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) ಇದೆ.

ಆ) ಕೇಂದ್ರ ರೇಷ್ಮೆ ಮಂಡಳಿ ಮತ್ತು ಸ್ವಿಸ್ ಅಭಿವೃದ್ಧಿ ಸಹಕಾರ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ, ಬಾಪೂಜಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಟೆಕ್ನಾಲಜಿ, ದಾವಣಗೆರೆ ಮತ್ತು ಪಿಎಸ್‌ಜಿ ಕಾಲೇಜ್ ಆಫ್ ಟೆಕ್ನಾಲಜಿ ಕೊಯಮತ್ತೂರುನಲ್ಲಿ, ರೇಷ್ಮೆ ನಿಟ್ಟಿಂಗ್ ತಾಂತ್ರಿಕತೆಯ ಸಂಶೋಧನೆ ಮಾಡಲಾಗಿದೆ. ತಮಿಳುನಾಡಿನ ಸ್ಟಾಲಿಯನ್ ಗಾರ್ಮೆಂಟ್ಸ್ ಜೊತೆ ಬಿಐಇಟಿ ಒಪ್ಪಂದ ಮಾಡಿಕೊಂಡು ನಿಟ್ಟಿಂಗ್ ತಂತ್ರಜ್ಞಾನವನ್ನು ಬಳಸಿರುವುದಾಗಿ ತಿಳಿದು ಬಂದಿದೆ.

ಇ) ಇದೆ.

ಮಾಗಡಿ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಅಬಿವೃದ್ಧಿ ನಿಗಮಕ್ಕೆ ಸರ್ಕಾರದಿಂದ ಬಿಡುಗಡೆಯಾದ ಹಣ

2687 (3173)) ಶ್ರೀ ರೇವಣ್ಣ ಹೆಚ್.ಎಂ. (ಮಾಗಡಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಕಳೆದ ಸಾಲಿನಲ್ಲಿ ಬಿಡುಗಡೆಯಾಗಿರುವ ಹಣವೆಷ್ಟು?

ಆ) ಮಾಗಡಿ ತಾಲ್ಲೂಕಿಗೆ ಬಿಡುಗಡೆಯಾಗಿರುವ ಹಣವೆಷ್ಟು;

ಇ) ಎಷ್ಟು ಜನ ಫಲಾನುಭವಿಗಳಿಗೆ ನಿಗಮದಿಂದ ಸವಲತ್ತು ಮಂಜೂರು ಮಾಡಲಾಗಿದೆ?